# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 710
ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್.
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 12-03-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಸಾರಿಗೆ ನಿಗಮಗಳು ನಷ್ಟದಲ್ಲಿರುವುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ನಷ್ಟ ಅನುಭವಿಸುತ್ತಿರುವ ಕುರಿತು ಆರ್ಥಿಕ ಪುನಶ್ಚೇತನಕ್ಕೆ ಸರ್ಕಾರದ ಯೋಜನೆಗಳಾವುವು; ಸರ್ಕಾರಿ ಬಸ್ ನಿಗಮಗಳ ನಷ್ಟವನ್ನು ಮುಕ್ತಾಯಗೊಳಿಸಲು ರೂಪಿಸಿರುವ ಯೋಜನೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳು ಕಳೆದ 05 ವರ್ಷಗಳಲ್ಲಿ ಅನುಭವಿಸಿದ ವಾರ್ಷಿಕ ಆದಾಯ ಮತ್ತು ನಷ್ಟದ ವಿವರಗಳು ಕೆಳಕಂಡಂತಿದೆ:- |

**(ರೂ.ಕೋಟಿಗಳಲ್ಲಿ)**

**ಕ.ರಾ.ರ.ಸಾ.ನಿಗಮ**

| ವರ್ಷ | ಆದಾಯ | ವೆಚ್ಚ | ನಷ್ಟ |
|---|---|---|---|
| 2019-20 | 3791.00 (ಸಬ್ಸಿಡಿ- 401.94) | 3948.56 | 157.56 |
| 2020-21 | 2271.92 (ಸಬ್ಸಿಡಿ- 565.14 | 2853.07 | 581.15 |
| 2021-22 | 2859.09 (ಸಬ್ಸಿಡಿ- 635.88) | 3282.40 | 423.31 |
| 2022-23 | 4573.68 (ಸಬ್ಸಿಡಿ- 963.89) | 4616.57 | 42.89 (ಸಬ್ಸಿಡಿ-555.00) |
| 2023-24 | 4544.41 (ಸಬ್ಸಿಡಿ- 248.53) | 4839.84 | 295.43 |
| **ಒಟ್ಟು** | **18040.10 (ಸಬ್ಸಿಡಿ-2815.38)** | **19540.44** | **1500.34** |

**ಬೆಂ.ಮ.ಸಾ.ಸಂಸ್ಥೆ**

| ವರ್ಷ | ಆದಾಯ | ವೆಚ್ಚ | ನಷ್ಟ |
|---|---|---|---|
| 2019-20 | 2119.96 (ಸಬ್ಸಿಡಿ-181.75) | 2669.30 | 549.34 |
| 2020-21 | 1853.05 (ಸಬ್ಸಿಡಿ-998.97) | 2017.25 | 164.20 |
| 2021-22 | 2115.12 (ಸಬ್ಸಿಡಿ-1037.95) | 2293.37 | 178.25 |
| 2022-23 | 2937.66 (ಸಬ್ಸಿಡಿ-1123.69) | 3015.04 | 77.38 (ಸಬ್ಸಿಡಿ-920.00) |
| 2023-24 | 2613.80 (ಸಬ್ಸಿಡಿ-407.55) | 3189.25 | 575.45 |
| **ಒಟ್ಟು** | **11639.59 (ಸಬ್ಸಿಡಿ-3749.91)** | **13184.21** | **1544.62** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

**ಕ.ಕ.ರ.ಸಾ.ನಿಗಮ**

| ವರ್ಷ | ಆದಾಯ | ವೆಚ್ಚ | ನಷ್ಟ |
|---|---|---|---|
| 2019-20 | 1837.19 (ಸಬ್ಸಿಡಿ-215.29) | 1926.46 | 89.27 |
| 2020-21 | 1281.41 (ಸಬ್ಸಿಡಿ-331.20) | 1467.86 | 186.45 |
| 2021-22 | 1467.90 (ಸಬ್ಸಿಡಿ-260.13) | 1693.72 | 225.82 |
| 2022-23 | 2239.98 (ಸಬ್ಸಿಡಿ-449.39) | 2354.96 | 114.98 (ಸಬ್ಸಿಡಿ-205.00) |
| 2023-24 | 2291.85 (ಸಬ್ಸಿಡಿ-121.23) | 2452.97 | 161.12 |
| ಒಟ್ಟು | **9118.33 (ಸಬ್ಸಿಡಿ-1377.24)** | **9895.97** | **777.64** |

**ವಾ.ಕ.ರ.ಸಾ.ಸಂಸ್ಥೆ**

| ವರ್ಷ | ಆದಾಯ | ವೆಚ್ಚ | ನಷ್ಟ |
|---|---|---|---|
| 2019-20 | 1955.41 (ಸಬ್ಸಿಡಿ-218.03) | 2141.87 | 186.46 |
| 2020-21 | 1282.47 (ಸಬ್ಸಿಡಿ-383.87) | 1671.55 | 389.08 |
| 2021-22 | 1471.61 (ಸಬ್ಸಿಡಿ-307.14) | 1933.68 | 462.07 |
| 2022-23 | 2874.46 (ಸಬ್ಸಿಡಿ-1034.67) | 2900.95 | 26.49 (ಸಬ್ಸಿಡಿ-720.00) |
| 2023-24 | 2372.81 (ಸಬ್ಸಿಡಿ-142.31) | 2695.29 | 322.48 |
| ಒಟ್ಟು | **9956.76 (ಸಬ್ಸಿಡಿ-2086.02)** | **11343.34** | **1386.58** |

ರಾಜ್ಯ ರಸ್ತೆ ಸಾರಿಗೆ ನಿಗಮಗಳ ಆರ್ಥಿಕ ಪುನಶ್ಚೇತನಕ್ಕೆ ರೂಪಿಸಿರುವ ಯೋಜನೆಗಳು ಈ ಕೆಳಕಂಡಂತಿದೆ:-

- ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act,1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತವೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಿದೆ.
- ಡೀಸೆಲ್ ತೈಲ ಬೆಲೆ ಹೆಚ್ಚಳದೊಂದಿಗೆ ಸಿಬ್ಬಂದಿ ವೆಚ್ಚ, ವಾಹನ ಬಿಡಿ ಭಾಗಗಳ ವೆಚ್ಚ ಒಳಗೊಂಡಂತೆ ಒಟ್ಟು ಕಾರ್ಯಾಚರಣೆ ವೆಚ್ಚ ಹೆಚ್ಚಾಗಿ ನಿಗಮಕ್ಕೆ ಹೆಚ್ಚಿನ ಆರ್ಥಿಕ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಹೊರೆಯುಂಟಾಗಿದ್ದ ಕಾರಣ ದಿನಾಂಕ 04/05-01-2025 ರಿಂದ ಜಾರಿಗೆ ಬರುವಂತೆ ಬಸ್ ಪ್ರಯಾಣ ದರವನ್ನು ಶೇಕಡ 15ರಷ್ಟು ಪರಿಷ್ಕರಣೆ ಮಾಡಲಾಗಿದೆ.<br>• ಸಾರಿಗೆ ನಿಗಮಗಳಿಗೆ ಹೊಸ ವಾಹನ ಖರೀದಿಗಾಗಿ 2023-24ನೇ ಸಾಲಿನಲ್ಲಿ ನಿಗಮಕ್ಕೆ ರೂ.500.00 ಕೋಟಿಗಳ ವಿಶೇಷ ಬಂಡವಾಳ ಅನುದಾನವನ್ನು ಒದಗಿಸಲಾಗಿದೆ.<br>• ಸಾರಿಗೆ ನಿಗಮಗಳು ನವೆಂಬರ್—24ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತ ಪಾವತಿಸಲು ರೂ.2000.00 ಕೋಟಿ ಮೊತ್ತದ ಸಾಲವನ್ನು ಸರ್ಕಾರದ ಖಾತರಿ/ ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಪಡೆಯಲು ಅನುಮೋದನೆ ನೀಡಿದೆ.<br>• ನಾಲ್ಕು ಸಾರಿಗೆ ಸಂಸ್ಥೆಗಳಿಗೆ ದಿನಾಂಕ:01.01.2020ರಿಂದ ದಿನಾಂಕ:28.02.2023ರವರೆಗಿನ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ/ ನೌಕರರಿಗೆ ದಿನಾಂಕ:01.01.2020ರ ಪರಿಷ್ಕೃತ ವೇತನ ಶ್ರೇಣಿಯನ್ವಯ ಪಾವತಿಸಬೇಕಾದ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮೊತ್ತದ ಪಾವತಿಗಾಗಿ ಒಟ್ಟು ರೂ.224.05 ಕೋಟಿಗಳನ್ನು ಬಿಡುಗಡೆಗೊಳಿಸಿದೆ.<br>• ನಾಲ್ಕು ಸಾರಿಗೆ ನಿಗಮಗಳ ನಗದು ಕೊರತೆಯನ್ನು ನಿಭಾಯಿಸಲು 2023-24ನೇ ಸಾಲಿನಲ್ಲಿ ನಿಗಮಗಳು ಸರ್ಕಾರಕ್ಕೆ ಪಾವತಿ ಮಾಡಬೇಕಾದ ಮೋಟಾರು ವಾಹನ ತೆರಿಗೆ ರೂ.581.47 ಕೋಟಿಗಳ ಪಾವತಿಯಿಂದ ವಿನಾಯಿತಿಯನ್ನು ನೀಡಿರುತ್ತದೆ ಹಾಗೂ 2024-25ನೇ ಸಾಲಿನಲ್ಲಿ ನಿಗಮಗಳು ಸರ್ಕಾರಕ್ಕೆ ಪಾವತಿಸಬೇಕಾದ ಮೋಟಾರು ವಾಹನ ತೆರಿಗೆ ಮೊತ್ತ ರೂ.576.90 ಕೋಟಿಗಳನ್ನು ಪುಸ್ತಕ ಹೊಂದಾಣಿಕೆ ಮಾಡಲು ಅನುಮೋದನೆ ನೀಡಿದೆ.<br>ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ನಷ್ಟವನ್ನು ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳ/ ಯೋಜನೆಗಳ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ.</td><td>ಗ್ರಾಮೀಣ ಪ್ರದೇಶಗಳಲ್ಲಿ ಬಸ್ ಸೇವೆಗಳ ಕೊರತೆಯನ್ನು ತಪ್ಪಿಸಲು ಸರ್ಕಾರ ಹೊಸ ಬಸ್‌ಗಳನ್ನು ನೀಡುವ ಯೋಜನೆ ಇದೆಯೇ; ಇದ್ದರೆ, ಎಷ್ಟು ಬಸ್‌ಗಳನ್ನು ನೀಡುವುದು;</td><td>
ಹೌದು. ಸರ್ಕಾರದ ಯೋಜನೆಯಿದೆ.<br><br>
ಬೆಂ.ಮ.ಸಾ.ಸಂಸ್ಥೆಯನ್ನು ಹೊರತುಪಡಿಸಿ ಉಳಿದ ಸಾರಿಗೆ ಸಂಸ್ಥೆಗಳಿಂದ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರಲಿಲ್ಲ.<br><br>
ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ 2024-25ನೇ ಸಾಲಿನಲ್ಲಿ ನೂತನವಾಗಿ ಖರೀದಿಸಿರುವ/ ಯೋಜಿಸಿರುವ ಬಸ್ಸುಗಳ ಸಂಖ್ಯೆ ಕೆಳಕಂಡಂತಿದೆ:-
<table>
<tr><th>ನಿಗಮ/ ಸಂಸ್ಥೆ</th><th>ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>904</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>1528<br>(ಡೀಸೇಲ್-820 ಇ.ವಿ.. ಜಿ.ಸಿ.ಸಿ-708)</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>570</td></tr>
<tr><td>ಕ.ಕ.ರ.ಸಾ.ನಿಗಮ</td><td>330</td></tr>
<tr><td>ಒಟ್ಟು</td><td>3332</td></tr>
</table>
<br>
ಕ.ರಾ.ರ.ಸಾ.ನಿಗಮ<br>
2024-25ನೇ ಸಾಲಿನಲ್ಲಿ 404 ಹೊಸ ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದ್ದು, ಅದರಲ್ಲಿ 273 ಹೊಸ ಅನುಸೂಚಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ ಹಾಗೂ ಮುಂದಿನ 2025-26ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ 300 ಹೊಸ ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದೆ. ಹೊಸ ಅನುಸೂಚಿಗಳ ಸೇರ್ಪಡೆಗೆ ಅನುಗುಣವಾಗಿ ಹೊಸ ಬಸ್‌ಗಳನ್ನು ನೀಡಲಾಗುವುದು.<br><br>
ಬೆಂ.ಮ.ಸಾ.ಸಂಸ್ಥೆ<br>
ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 5867 ಅನುಸೂಚಿಗಳನ್ನು 61,631 ಸುತ್ತುವಳಿಗಳೊಂದಿಗೆ 12.06 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸಿ, ಸಾರಿಗೆ ಸೇವೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.<br>ಸಂಸ್ಥೆಯು ವಿವಿಧ ಮಾದರಿಯ ಸೇವೆಗಳಾದ ಸಾಮಾನ್ಯ, ವಜ್ರ, ವಾಯುವಜ್ರ, ಮೆಟ್ರೋ ಫೀಡರ್, ಸಾಂದರ್ಭಿಕ ಒಪ್ಪಂದ, ಖಾಯಂ ಗುತ್ತಿಗೆ ಹಾಗೂ ಡೆಡಿಕೇಟೆಡ್ ಸೇವೆಗಳನ್ನು ಕಾರ್ಯಾಚರಣೆ ಮಾಡುತ್ತಿದೆ.<br>NICE ರಸ್ತೆಯಲ್ಲಿ ಪ್ರತಿ 5 ರಿಂದ 10 ನಿಮಿಷದ ಅಂತರದಲ್ಲಿ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು, ಸಾರ್ವಜನಿಕರಿಂದ ಧನಾತ್ಮಕ ಪ್ರತಿಕ್ರಿಯೆ ದೊರತಿರುತ್ತದೆ.<br><br>**ವಾ.ಕ.ರ.ಸಾ.ಸಂಸ್ಥೆ**<br>ಶಕ್ತಿ ಯೋಜನೆ ನಂತರ ಪ್ರತಿ ದಿನ 196 ಅನುಸೂಚಿಗಳನ್ನು ಹಾಗೂ ಒಟ್ಟು 2777 ಸರತಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಜೂನ್-23ರ ಶಕ್ತಿ ಯೋಜನೆ ನಂತರದ ಅವಧಿಯಲ್ಲಿ 129 ಅಂತರರಾಜ್ಯ ಸಾರಿಗೆಗಳನ್ನು ಸ್ಥಗಿತಗೊಳಿಸಿ, ಸದರಿ ವಾಹನಗಳನ್ನೂ ಸಹ ರಾಜ್ಯದೊಳಗೆ ಕಾರ್ಯಾಚರಣೆಗೆ ಬಳಸಿಕೊಂಡು ಗ್ರಾಮೀಣ ಪ್ರದೇಶದ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಕಾರ್ಯಾಚರಣೆಗೆ ಕ್ರಮವಹಿಸಲಾಗಿದೆ.<br>ಪ್ರಸ್ತುತ ಕಾರ್ಯಾಚರಣೆಯಲ್ಲಿರುವ 4763 ಅನುಸೂಚಿಗಳ ಪೈಕಿ 4237 ಅನುಸೂಚಿಗಳಿಂದ 36342 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.2024-25 ನೇ ಸಾಲಿನಲ್ಲಿ 4745 ಅನುಸೂಚಿಗಳ ಕಾರ್ಯಾಚರಣೆಗೆ ಕಾರ್ಯಯೋಜನೆಯನ್ನು ರೂಪಿಸಿ ಜಾರಿಗೊಳಿಸಲಾಗಿದೆ.<br>ಮುಂದಿನ ಕ್ರಿಯಾ ಯೋಜನೆ 2025-26 ನೇ ಸಾಲಿನಲ್ಲಿ ನೂತನ 200 ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದೆ.<br><br>**ಕ.ಕ.ರ.ಸಾ.ನಿಗಮ**<br>ಪ್ರಸ್ತುತ ಕ.ಕ.ರ.ಸಾ.ನಿಗಮದಿಂದ ಪ್ರತಿದಿನ ಒಟ್ಟು 4636 ಅನುಸೂಚಿಗಳಿಂದ 27200 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಅಲ್ಲದೇ 2025-26 ನೇ ಸಾಲಿನಲ್ಲಿ 250 ಹೊಸ ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿರುತ್ತದೆ. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ.</td><td>ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಎಷ್ಟು ಹೊಸ ಬಸ್‌ಗಳನ್ನು ಖರೀದಿಸಿದೆ; (ನಿಗಮವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ/ ಸೇರ್ಪಡೆಗೊಳಿಸಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:-
<table>
<tr><th>ನಿಗಮ/ ಸಂಸ್ಥೆ</th><th>2022-23</th><th>2023-24</th><th>2024-25 (ಫೆಬ್ರವರಿ ಅಂತ್ಯಕ್ಕೆ)</th><th>ಒಟ್ಟು</th></tr>
<tr><td>ಕ.ರಾ.ರ.ಸಾ.ನಿಗಮ</td><td>20</td><td>440</td><td>698</td><td>1158</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>448</td><td>345</td><td>1528</td><td>2321</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>00</td><td>296</td><td>560</td><td>856</td></tr>
<tr><td>ಕ.ಕ.ರ.ಸಾ.ನಿಗಮ</td><td>00</td><td>722</td><td>303</td><td>1025</td></tr>
<tr><td>ಒಟ್ಟು</td><td>468</td><td>1803</td><td>3089</td><td>5360</td></tr>
</table></td></tr>
<tr><td>ಈ.</td><td>ದೀರ್ಘ ಪ್ರಯಾಣದ ಸಂದರ್ಭಗಳಲ್ಲಿ ಶೌಚಾಲಯ ಇಲ್ಲದೆ ಪ್ರಯಾಣಿಕರು ಪರಿತಪಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ದೀರ್ಘ ಪ್ರಯಾಣದ ಬಸ್‌ಗಳಲ್ಲಿ ಶೌಚಾಲಯ ಸೌಲಭ್ಯ ಒದಗಿಸುವ ಯೋಜನೆ ಇದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು)</td><td>ರಾಜ್ಯದ ರಸ್ತೆ ಸಾರಿಗೆ ನಿಗಮಗಳ ಬಸ್ಸುಗಳಲ್ಲಿ ದೀರ್ಘ ಪ್ರಯಾಣದ ಸಂದರ್ಭಗಳಲ್ಲಿ ಶೌಚಾಲಯ ಸೌಲಭ್ಯದ ಕುರಿತು ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ:-<br><br><u>ಕ.ರಾ.ರ.ಸಾ.ನಿಗಮ</u>:-<br><br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ದೂರ ಮಾರ್ಗಕ್ಕೆ ಕಾರ್ಯಾಚರಿಸುವ ಅನುಸೂಚಿ ಮಾರ್ಗಗಳಲ್ಲಿ ಬರುವ ನಿಗದಿತ ಬಸ್ ನಿಲ್ದಾಣಗಳಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.<br><br>ಇದರ ಜೊತೆಗೆ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ದೂರ ಸಂಚಾರದ ಪ್ರಯಾಣಿಕರಿಗೆ 2 ರಿಂದ 2 ಗಂಟೆ 30 ನಿಮಿಷ ಪ್ರಯಾಣದ ನಂತರ, ಅಂದರೆ ಸುಮಾರು 80 ರಿಂದ 100 ಕಿ.ಮೀ ಪ್ರಯಾಣದ ನಂತರ ದಣಿವು/ಬಳಲಿಕೆಯನ್ನು ನಿವಾರಣೆಗೊಳಿಸಲು ಮಾರ್ಗಮಧ್ಯೆ 10 ರಿಂದ 15 ನಿಮಿಷಗಳ ಕಾಲ ಲಘು ವಿಶ್ರಾಂತಿ, ನೈಸರ್ಗಿಕ ಕರೆ ಮತ್ತು ಊಟೋಪಚಾರಕ್ಕಾಗಿ, ವಾಹನಗಳನ್ನು ಅನುಕೂಲಕರ ಸ್ಥಳದಲ್ಲಿ ನಿಲ್ಲಿಸಲು ಉತ್ತಮ ಸೌಲಭ್ಯ ಹೊಂದಿರುವ ಫಲಹಾರ ಮಂದಿರಗಳನ್ನು ನಿಗದಿ ಮಾಡಲಾಗುತ್ತದೆ.<br><br>ಪ್ರತಿ ತಿಂಗಳು ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಆಯಾ ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಫಲಹಾರ ಮಂದಿರಗಳನ್ನು ವಿಭಾಗದ ಅಧಿಕಾರಿಗಳಿಂದ ಪರಿವೀಕ್ಷಣೆ ನಡೆಸಿ, ನಿಬಂಧನೆಗಳಿಗನುಗುಣವಾಗಿ ಫಲಹಾರ ಮಂದಿರಗಳಲ್ಲಿನ ವ್ಯವಸ್ಥೆ ಸಮರ್ಪಕವಾಗಿರುವ ಬಗ್ಗೆ ದೃಢೀಕರಿಸಿಕೊಳ್ಳುವ ವ್ಯವಸ್ಥೆ ಇರುತ್ತದೆ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಅಲ್ಲದೆ, ನಿಗಮದಿಂದ International Airport to other cities of the stateಗೆ ಕಾರ್ಯಚರಣೆ ಮಾಡುತ್ತಿರುವ 15 ಸಂಖ್ಯೆಯ "Fly Bus" ಗಳಲ್ಲಿ ಶೌಚಾಲಯ ಸೌಲಭ್ಯ ಒದಗಿಸಲಾಗಿದೆ.<br><br>**ಬೆಂ.ಮ.ಸಾ.ಸಂಸ್ಥೆ:-**<br>ಸಂಸ್ಥೆಯ ಸಾರಿಗೆಗಳು ನಗರ ಮತ್ತು ಹೊರವಲಯದ ಪ್ರದೇಶಗಳಿಗೆ ಮಾತ್ರ ಕಾರ್ಯಾಚರಣೆಯಲ್ಲಿರುತ್ತವೆ.<br><br>**ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮ:-**<br>ಸಂಸ್ಥೆಯ ದೀರ್ಘ ಪ್ರಯಾಣದ ಸೇವೆಯನ್ನು ನೀಡುತ್ತಿರುವ ಎಲ್ಲ ವೇಗದೂತ ಸಾರಿಗೆಗಳು ಮಾರ್ಗದ ಮಧ್ಯದಲ್ಲಿ ಬರುವ ಪ್ರಮುಖ ಬಸ್ ನಿಲ್ದಾಣಗಳ ಮೂಲಕ ಕಾರ್ಯಾಚರಣೆಯಾಗುತ್ತಿದ್ದು, ಸದರಿ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕೆ ಶೌಚಾಲಯ/ಮೂತ್ರಾಲಯಗಳ ಸೌಲಭ್ಯ ಇರುತ್ತವೆ.<br><br>ದೀರ್ಘ ಪ್ರಯಾಣದ ಸೇವೆ ನೀಡುತ್ತಿರುವ ಪ್ರತಿಷ್ಠಿತ (sleeper, Ac/Non Ac, Volvo) ಸಾರಿಗೆಗಳಿಗೆ ಸಹ ಮಾರ್ಗ ಮಧ್ಯದ ಕೆಲವು ಪ್ರಮುಖ ಬಸ್ ನಿಲ್ದಾಣಗಳಲ್ಲಿ ಮಾತ್ರ ನಿಲುಗಡೆಗೆ ಅವಕಾಶ ಮಾಡಲಾಗಿದ್ದು, ಸದರಿ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ನೈಸರ್ಗಿಕ ಕರೆಗಳಿಗೆ ಸೂಸಜ್ಜಿತ ಮೂತ್ರಾಲಯ ಹಾಗೂ ಶೌಚಾಲಯಗಳ ವ್ಯವಸ್ಥೆ ಇರುತ್ತದೆ. ಅಲ್ಲದೆ ಪ್ರಯಾಣಿಕರ ನೈಸರ್ಗಿಕ ಕರೆಗಳಿಗೆ ಅನುಕೂಲವಾಗುವಂತೆ ಪ್ರಯಾಣದ ಮಾರ್ಗ ಮಧ್ಯ ಸುರಕ್ಷಿತ ಸ್ಥಳಗಳಲ್ಲಿ ಬಸ್ ನಿಲುಗಡೆಗೆ ಚಾಲನಾ ಸಿಬ್ಬಂದಿಗಳಿಗೆ ತಿಳಿಸಲಾಗಿರುತ್ತದೆ.<br><br>ದೀರ್ಘ ಪ್ರಯಾಣದ ಪ್ರಯಾಣಿಕರ ಅನುಕೂಲಕ್ಕಾಗಿ ಕೆಲವು ಕಡೆಗಳಲ್ಲಿ ಸಂಸ್ಥೆಯಿಂದಲೇ ಶೌಚಾಲಯ ವ್ಯವಸ್ಥೆ ಇರುವ ಡಾಬಾಗಳನ್ನು/ಹೋಟೆಲ್‌ಗಳನ್ನು ಗುರುತಿಸಿ ಅಲ್ಲಿ ನಿಲುಗಡೆಗೊಳಿಸಿ, ಪ್ರಯಾಣಿಕರಿಗೆ ನೈಸರ್ಗಿಕ ಕರೆ/ಊಟ-ಉಪಹಾರಕ್ಕಾಗಿ ಅನುಕೂಲ ಕಲ್ಪಿಸಲಾಗಿದೆ. |

ಸಂಖ್ಯೆ: ಟಿಡಿ 41 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

**ಅನುಬಂಧ**

**ಕ.ರಾ.ರ.ಸಾ.ನಿಗಮವನ್ನು ನಷ್ಟದಿಂದ ಮುಕ್ತಿಗೊಳಿಸಿ, ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡಿರುವ ಕ್ರಮಗಳ/ಯೋಜನೆಗಳವಿವರಗಳು**

- ಕ.ರಾ.ರ.ಸಾ.ನಿಗಮದವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧ ಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಉತ್ಸವ ಮುಂತಾದ ಪ್ರತಿ ಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಕರ್ನಾಟಕ ಮತ್ತು ನೆರೆರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮತ್ತು ಪುದುಚೆರಿ ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಸ್ತಾವನೆ ಇದ್ದು ಒಪ್ಪಂದಗಳ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಈ ರಾಜ್ಯಗಳ ಜೊತೆಗೆ ಒಪ್ಪಂದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯಗಳಿಸಲು ಅವಕಾಶವಾಗುವುದು.
- ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್(ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕರಾರಸಾನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್‌ಎಸ್ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ಎಂ-ಬುಕಿಂಗ್ ಮತ್ತು ಇ-ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ.
- ಕ.ರಾ.ರ.ಸಾ.ನಿಗಮದ ವತಿಯಿಂದ ವಿವಿಧ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್‌ಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಇನ್ನೂ ಹಲವು ಪ್ರವಾಸಿ ತಾಣಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಪ್ಯಾಕೇಜ್ ಟೂರ್‌ಗಳನ್ನು ಪ್ರಾರಂಭಿಸಲಾಗುವುದು.
- ಪಾರ್ಸೆಲ್ ಅಂಡ್ ಕೊರಿಯರ್ ವ್ಯವಸ್ಥೆಯನ್ನು ಜಾರಿಗೊಳಿಸಿ ಲಗೇಜು ಆದಾಯವನ್ನು ಹೆಚ್ಚಳ ಮಾಡಲು ಕ್ರಮ ಕೈಗೊಳ್ಳಲಾಗಿದೆ
- ನಿಗಮದಲ್ಲಿ 20 ಟ್ರಕ್‌ಗಳನ್ನು ಖರೀದಿ ಮಾಡಿ ಸಾರ್ವಜನಿಕ ಲಗೇಜು ಸಾಗಾಣಿಕೆ ಮಾಡಿ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ
- ಎಲ್ಲಾ ಬಸ್ಸು ನಿಲ್ದಾಣಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ಒದಗಿಸಿ ಸಂಚಾರೇತರ ಆದಾಯ ಪಡೆಯಲು ಕ್ರಮ ವಹಿಸಿದೆ.
- ಚಾಲನಾ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ವಾಹನ ತಯಾರಿಕಾ ಸಂಸ್ಥೆ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ತರಬೇತಿ ಕಾರ್ಯಗಳನ್ನು ಹಮ್ಮಿಕೊಂಡು, ಉತ್ತಮ ಚಾಲನಾ ಕೌಶಲ್ಯಗಳ ಬಗ್ಗೆ ಅರಿವು ಮೂಡಿಸಿ ಇಂಧನ ಕೆ.ಎಂ.ಪಿ.ಎಲ್. ವೃದ್ಧಿಸಲು ಹಾಗೂ ಸುರಕ್ಷತಾ ಚಾಲನಾ ಕುರಿತು ಕ್ರಮ ಕೈಗೊಳ್ಳಲಾಗಿರುತ್ತದೆ.
- ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳಿಗೆ ತಯಾರಿಕಾ ಸಂಸ್ಥೆ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ಕಾಲಕಾಲಕ್ಕೆ ತರಬೇತಿ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡು, ವಾಹನಗಳ ಉತ್ತಮ ತಾಂತ್ರಿಕ ನಿರ್ವಹಣಾ ವಿಧಾನಗಳನ್ನು ಅನುಸರಿಸಿ ಅವಘಡಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.
- ಕ.ರಾ.ರ.ಸಾ.ನಿಗಮವು ಹೊಸ ತಾಂತ್ರಿಕತೆಯ ವಾಹನಗಳನ್ನು ಸೇರ್ಪಡೆಗೊಳಿಸಿ ಮಾರ್ಗ ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ. ವಿಭಾಗದ ಘಟಕಗಳಿಂದ ವಾಹನಗಳನ್ನು ಮಾರ್ಗ

ಕಾರ್ಯಾಚರಣೆಗೆ ನಿಯೋಜಿಸುವ ಮುನ್ನ ವಾಹನಗಳ ತಾಂತ್ರಿಕ & ಶುಚಿತ್ವವನ್ನು ಪರಿಶೀಲಿಸಿ ಸುಸ್ಥಿತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಂಡ ನಂತರವೇ ಮಾರ್ಗ ಕಾರ್ಯಾಚರಣೆಗೆ ನಿಯೋಜಿಸುವುದರಿಂದ ಮಾರ್ಗ ಮಧ್ಯೆ ಯಾವುದೇ ತೊಂದರೆಗಳಿಲ್ಲದೆ ಸುಗಮ ಪ್ರಯಾಣಕ್ಕೆ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

- ತಾಂತ್ರಿಕ ಸಿಬ್ಬಂದಿಗಳ ಕೊರತೆಯಿದ್ದರೂ, ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಹೊರಗುತ್ತಿಗೆ ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸಿ ತಯಾರಿಕಾ ಸಂಸ್ಥೆ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ಕಾಲ ಕಾಲಕ್ಕೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ವಾಹನಗಳ ಉತ್ತಮ ತಾಂತ್ರಿಕ ನಿರ್ವಹಣಾ ವಿಧಾನಗಳನ್ನು ಅನುಸರಿಸಿ ಅವಘಡಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.
- ವಾಹನಗಳಲ್ಲಿ ಅಳವಡಿಸಿರುವ ಟೈರುಗಳ ನಿರ್ವಹಣೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿ ಟೈರುಗಳ ಮೇಲಿನ ವೆಚ್ಚವನ್ನು ನಿಯಂತ್ರಿಸಲಾಗುತ್ತಿರುತ್ತದೆ. ಕಾರ್ಯಾಚರಣೆಯಲ್ಲಿರುವ ವಾಹನಗಳಿಗೆ ಅವಶ್ಯಕತೆಗನುಗುಣವಾಗಿ ಅಗತ್ಯ ಬಿಡಿಭಾಗಗಳನ್ನು ಮೂಲ ತಯಾರಿಕಾ ಸಂಸ್ಥೆ ಹಾಗೂ ಸರಬರಾಜುದಾರರುಗಳಿಂದಲೇ ಉತ್ತಮ ಗುಣಮಟ್ಟದ ಬಿಡಿಭಾಗಗಳನ್ನು ಖರೀದಿಸಿ ವಾಹನಗಳಿಗೆ ಅಳವಡಿಸಲಾಗುತ್ತಿರುತ್ತದೆ.
- ಉಳಿದಂತೆ ನಿರುಪಯುಕ್ತಗೊಂಡಿರುವ ವಾಹನಗಳಲ್ಲಿರುವ ಬಳಸಬಹುದಾದ ಬಿಡಿಭಾಗಗಳನ್ನು ಕಳಚಿ ಸದರಿ ವಾಹನಗಳಿಗೆ ಅಳವಡಿಸುವುದರಿಂದ ಬಿಡಿಭಾಗಗಳ ಮೇಲಿನ ವೆಚ್ಚವನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.
- ಪ್ರಸ್ತುತ ನಿಗಮದಲ್ಲಿ ಹಳೆಯ ವಾಹನಗಳನ್ನು ಸಂಪೂರ್ಣ ನವೀಕರಣಗೊಳಿಸುವ ಅಂದರೆ ಪುನಶ್ಚೇತನ (refurbishing)ಗೊಳಿಸುವ ಕಾರ್ಯ ಜಾರಿಯಲ್ಲಿದ್ದು, ಸದರಿ ಕಾರ್ಯಕ್ರಮದಲ್ಲಿ ವಾಹನದ ಶಿಥಿಲಗೊಂಡ ಕವಚ/ಪ್ರಯಾಣಿಕರ ಆಸನ/ಗಾಜುಗಳು ಇವುಗಳನ್ನು ಸಂಪೂರ್ಣವಾಗಿ ಹೊಸ ಬಿಡಿಭಾಗಗಳೊಂದಿಗೆ ಬದಲಾಯಿಸಿ ಆಚರಣೆಗೊಳಿಸಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ 1307 ಸಾಮಾನ್ಯ ವಾಹನಗಳು ಹಾಗೂ 17 ವೋಲ್ವೋ ವಾಹನಗಳನ್ನು ಅಂದರೆ ಒಟ್ಟಾರೆ 1324 ಹಳೆಯ ವಾಹನಗಳನ್ನು ನಿಗಮದ ಕಾರ್ಯಾಗಾರಗಳಲ್ಲಿ Refurbish ಮಾಡಿ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಉಪ ಮುಖ್ಯ ಸಂಖ್ಯಾಧಿಕಾರಿ
ಕರಾರಸಾನಿಗಮ

# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಆರ್ಥಿಕ ಪುನಶ್ಚೇತನಕ್ಕೆ ಸರ್ಕಾರವು ಈ ಕೆಳಕಂಡಂತೆ ಯೋಜನೆಗಳನ್ನು ರೂಪಿಸಿದೆ/ರೂಪಿಸಿರುತ್ತದೆ

ಅ) ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಮನಗಂಡ ಸರ್ಕಾರವು ಕಳೆದ ಮತ್ತು ಪ್ರಸಕ್ತ ವರ್ಷದಲ್ಲಿ ಸಂಸ್ಥೆಗೆ ಈ ಕೆಳಕಂಡಂತೆ ಆರ್ಥಿಕ ನೆರವನ್ನು ಒದಗಿಸಿರುತ್ತದೆ.

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿವರಗಳು | 2023-24 | 2024-25 (28.02.2025 ರ ಅಂತ್ಯಕ್ಕೆ) |
|---|---|---|---|
| 1 | ಧನಸಹಾಯ /ಪರಿಹಾರ<br>ಸಂಸ್ಥೆಯು ಆರ್ಥಿಕ ನಷ್ಟವನ್ನು ಪರಿಗಣಿಸಿ Opex difference in cost (Viability of Gap Funding –VGF) | 253.29 | 124.89<br>(ಹಂಚಿಕೆ ರೂ.150.00 ಕೋಟಿ) |
| 2 | ಮೋಟಾರು ವಾಹನ ತೆರಿಗೆ ವಿನಾಯಿತಿ | 119.88 | 94.45* |

( * - 2024-25 ನೇ ಸಾಲಿನಲ್ಲಿ ಸಂಸ್ಥೆಯು ಸರ್ಕಾರಕ್ಕೆ ಪಾವತಿಸಬೇಕಿದ್ದ ಮೋಟಾರು ವಾಹನ ತೆರಿಗೆ ಸಂಬಂಧ ರೂ.94.45 ಕೋಟಿಗಳನ್ನು ವಿದ್ಯಾರ್ಥಿ ಪಾಸ್ ಸಹಾಯಧನ (ಸಾಮಾನ್ಯ) ಲೆಕ್ಕ ಶೀರ್ಷಿಕೆ 3055-00-190-0-03-106 ರಡಿ ಹೆಚ್ಚುವರಿಯಾಗಿ ಒದಗಿಸಿ ಪುಸ್ತಕ ಹೊಂದಾಣಿಕೆ ಮಾಡಲಾಗಿರುತ್ತದೆ.)

ಆ) ಇದಲ್ಲದೆ ಸರ್ಕಾರವು ಬಾಕಿ ಹೊಣೆಗಾರಿಕೆಗಳ ಪೈಕಿ ಬಹುಮುಖ್ಯವಾದ ಇಂಧನ ಮತ್ತು ಭವಿಷ್ಯ ನಿಧಿ ಬಾಕಿ ತೀರುವಳಿಗೆ ರೂ.589.20 ಕೋಟಿಗಳ ಸಾಲವನ್ನು ಸರ್ಕಾರದ ಖಾತರಿ/ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಪಡೆಯಲು ಆದೇಶ ಸಂಖ್ಯೆ: ಟಿಡಿ 45 ಟಿಸಿಬಿ 2023, ದಿನಾಂಕ:31.12.2024ರಲ್ಲಿ ಆದೇಶಿಸಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು
ಬೆಂ.ಮ.ಸಾ.ಸಂಸ್ಥೆ

# ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

- ದಿ:05-01-25 ರಿಂದ ಜಾರಿಗೆ ಬರುವಂತೆ ಪ್ರಯಾಣ ದರವನ್ನು ಶೇ.15 ರಷ್ಟು ಪರಿಷ್ಕರಿಸಲಾಗಿದೆ.
- ಶಕ್ತಿ ಯೋಜನೆಯ ಸಂಪೂರ್ಣ ವೆಚ್ಚವನು ಮರುಪಾವತಿಸಲು ಸರ್ಕಾರಕ್ಕೆ ಕೋರಲಾಗಿದೆ.
- ಆಸ್ತಿಗಳ ನಗದೀಕರಣ (Asset Monetization) ಕ್ಕೆ ಕ್ರಮಕೈಗೊಳ್ಳಲಾಗುತ್ತಿದೆ.

- ಪ್ರಯಾಣಿಕ ಸ್ನೇಹಿಯಾಗಿ ನಗದುರಹಿತ ವಹಿವಾಟನ್ನು ಪ್ರೋತ್ಸಾಹಿಸಲು Prepaid RFID ಕಾರ್ಡ ಬಳಸಿ ಪ್ರಯಾಣಿಸಲು ಬೆಳಗಾವಿ ಹಾಗೂ ಹುಬ್ಬಳ್ಳಿ-ಧಾರವಾಡ ನಗರ ಸಾರಿಗೆಗಳಲ್ಲಿ ಹಾಗೂ ಎಲ್ಲ ವಿಭಾಗದಲ್ಲಿ UPI QR Code ಮೂಲಕ ನಗದುರಹಿತ ವಹಿವಾಟನ್ನು ಪ್ರಾರಂಭಿಸಲಾಗಿದೆ ಹಾಗೂ ಸದರಿ ವ್ಯವಸ್ಥೆಯನ್ನು ವಾಣಿಜ್ಯ, ಪಾಸು, ಕರಾರು ಒಪ್ಪಂದಗಳ ಮೊತ್ತ ಮತ್ತು ಅವತಾರ ಕೌಂಟರ್ ಗಳಿಗೂ ವಿಸ್ತರಿಸಲಾಗಿದೆ.

- ಸಂಸ್ಥೆಯಲ್ಲಿ ಚಾಲನಾ ಸಿಬ್ಬಂದಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಕಡಿಮೆ ಖರ್ಚಿನಲ್ಲಿ ಉತ್ತಮ ಆದಾಯ ತರುವ ನಿಟ್ಟಿನಲಿ ಪ್ರಸ್ತುತ 304 ಅನುಸೂಚಿಗಳನ್ನು ನಿರ್ವಾಹಕರಹಿತ ಸಾರಿಗೆಗಳಾಗಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುಸೂಚಿಗಳನ್ನು ನಿರ್ವಾಹಕ ರಹಿತ ಸಾರಿಗೆಗಳಾಗಿ ಕಾರ್ಯಾಚರಣೆ ಮಾಡುವ ಯೋಜನೆ ಇರುತ್ತದೆ.

- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹಾಗೂ ಪ್ರಯಾಣಿಕರನ್ನು ಸಂಸ್ಥೆ ವಾಹನಗಳತ್ತ ಆಕರ್ಷಿಸಲು ಸಂಸ್ಥೆಯ ಪ್ರಮುಖ 67 ಬಸ್ ನಿಲ್ದಾಣಗಳಲ್ಲಿ ವಾಹನ ಸಂಖ್ಯೆ, ನಿರ್ಗಮನ ವೇಳೆ, ತಲುಪುವ ವೇಳೆ, ಮಾರ್ಗದ ಮಾಹಿತಿಯನು, ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ಮಾಹಿತಿ ನೀಡಲಾಗುತ್ತಿದ.

- ಸಂಸ್ಥೆಯ ಪ್ರಮುಖ ಸ್ಥಳಗಳಿಂದ ವಿವಿಧ ಪ್ರವಾಸಿ ತಾಣಗಳಿಗೆ ನಿರ್ದಿಷ್ಟ ಮಾಹೆ/ಬೇಡಿಕೆಗೆ ಅನುಗುಣವಾಗಿ ಪ್ಯಾಕೇಜ್ ಟೂರ್ ವ್ಯವಸ್ಥೆಯನ್ನು ನೀಡಲಾಗುತ್ತಿದೆ.

- ಸಂಸ್ಥೆಯ ಸಾರಿಗೇತರ ಆದಾಯ (ವಾಣಿಜ್ಯ ಆದಾಯ) ಹೆಚ್ಚಿಸಲು, ವಿಶಾಲವಾದ ಖಾಲಿ ನಿವೇಶನ/ಸ್ಥಳ (ಹಳೆಯ ಕಟ್ಟಡಗಳನ್ನೊಳಗೊಂಡಂತೆ) ಗಳನ್ನು ಪರವಾನಿಗೆ ನೀಡಿ ವಾಣಿಜ್ಯ ಆದಾಯ ಹೆಚ್ಚಿಸಲು ಕ್ರಮವಹಿಸಲಾಗಿದೆ.

- ವಿಶಾಲವಾದ ಖಾಲಿ ನಿವೇಶನ/ಸ್ಥಳಗಳಲ್ಲಿ ಇಂಧನ ಘಟಕಗಳನ್ನು ಆರಂಭಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಬಾಡಿಗೆ ಆಧಾರದ ಮೇಲೆ 6 ಸ್ಥಳಗಳನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲಾಗಿದ್ದು, ವಾಣಿಜ್ಯ ಆದಾಯ ಹೆಚ್ಚಿಸುವ ಯೋಜನೆ ಜಾರಿಯಲ್ಲಿದೆ.

- ಬಸ್ಸುಗಳ ಮೇಲೆ ಜಾಹಿರಾತು ಮೂಲಕ ಆದಾಯ ಹೆಚ್ಚಳಕ್ಕೆ ಕ್ರಮ ವಹಿಸಲಾಗಿದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು

# ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ

**ನಿಗಮವನ್ನು ಲಾಭದಾಯಕವನ್ನಾಗಿ ಮಾಡಲು ಸಹಕಾರ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ.**

ಘಟಕ/ವಿಭಾಗಗಳ ಮಟ್ಟದಲ್ಲಿ ದಿನಂಪ್ರತಿ ಅನುಸೂಚಿವಾರು ಆದಾಯವನ್ನು ಪರಿಶೀಲಿಸಿ, ಕಡಿಮೆ ಆದಾಯ ಬರುವ/ಹೆಚ್ಚಿಗೆ ನಷ್ಟ ಉಂಟು ಮಾಡುವ ಅನುಸೂಚಿಗಳನ್ನು ಪರಿಷ್ಕರಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಡಬಲ್ ಕ್ರ್ಯೂ ಅನುಸೂಚಿಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಣೆ ಮಾಡಲಾಗುತ್ತಿದೆ.

ನಿಗಮದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಕಾರ್ಯಾಚರಣೆಯಲ್ಲಿರುವ ಜೀಪ್, ಕ್ರೂಜರ್ ಮುಂತಾದ ಖಾಸಗಿ ವಾಹನಗಳ ಕಾರ್ಯಾಚರಣೆ ನಿಯಂತ್ರಿಸಲು ಕ್ರಮ ಜರುಗಿಸುವಂತೆ ಕಾಲಕಾಲಕ್ಕೆ ಸಾರಿಗೆ ಆಯುಕ್ತರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಕೋರಲಾಗುತ್ತಿದೆ.

ಖಾಸಗಿ ವಾಹನಗಳ ಪೈಪೋಟಿ ಇರುವ ಮಾರ್ಗಗಳಲ್ಲಿ ಪ್ರೋತ್ಸಾಹದಾಯಕ ಪ್ರಯಾಣದರಗಳನ್ನು ಜಾರಿಗೊಳಿಸಿ ಪ್ರಯಾಣಿಕರನ್ನು ನಿಗಮದ ಸಾರಿಗೆಗಳತ್ತ ಆಕರ್ಷಿಸಲು ಕ್ರಮವಹಿಸಲಾಗುತ್ತಿದೆ.

- ಉತ್ತಮ ಆದಾಯ ಬರುವ ಮಾರ್ಗಗಳಲ್ಲಿ ಹೊಸ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಕೆಲವು ಆಯ್ದ ಪ್ರಮುಖ ಮಾರ್ಗಗಳಲ್ಲಿ ಎಸಿ ಸ್ಲೀಪರ್ ಹಾಗೂ ನಾನ್ ಎಸಿ ಸ್ಲೀಪರ್ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಸಾರಿಗೆ ಆದಾಯ ಸೋರಿಕೆಯಾಗದಂತೆ ಮಾರ್ಗ ತನಿಖಾ ಕಾರ್ಯವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಲಾಗುತ್ತಿದೆ.
- ಅನುಸೂಚಿಗಳಿಗೆ ಆದಾಯದ ಗುರಿಯನ್ನು ನಿಗದಿಪಡಿಸಿ, ಅದರಂತೆ ಆದಾಯವನ್ನು ಸಂದಾಯವಾಗುವಂತೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ತಿಳುವಳಿಕೆ ನೀಡಿ ಆದಾಯ ಹೆಚ್ಚಿಸಲು ಕ್ರಮ ಜರುಗಿಸಲಾಗುತ್ತಿದೆ.
- ವಿಭಾಗ ಮಟ್ಟದಲ್ಲಿ ಭೌತಿಕ ಮತ್ತು ಆರ್ಥಿಕ ಕಾರ್ಯಾಚರಣೆ ಕುರಿತಂತೆ ಶಾಖಾ ಮುಖ್ಯಸ್ಥರು ಹಾಗೂ ಘಟಕ ವ್ಯವಸ್ಥಾಪಕರನ್ನೊಳಗೊಂಡಂತೆ ವಾರಾಂತ್ಯ ಮತ್ತು ಮಾಸಾಂತ್ಯ ಸಭೆ ನಡೆಸಿ, ಸಾರಿಗೆ ಆದಾಯ ಉತ್ತಮ ಪಡಿಸಲು ಸಲಹೆಗಳನ್ನು/ನಿರ್ದೇಶನಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

  ವಿಭಾಗಗಳ ಅಧಿಕಾರಿಗಳು ಮೇಲಿಂದ ಮೇಲೆ ಘಟಕಗಳಿಗೆ ಭೇಟಿ ನೀಡಿ, ಕಡಿಮೆ ಆದಾಯ ಬರುವ ಅನುಸೂಚಿಗಳನ್ನು ಪರಿಶೀಲಿಸಿ, ಸದರಿ ಅನುಸೂಚಿಗಳ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಖಾಲಿ ಇರುವ ಮಳಿಗೆಗಳಿಗೆ ಟೆಂಡರ್ ಪ್ರಕ್ರಿಯೆ ಸರಳೀಕರಣಗೊಳಿಸಿ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಜಾಹೀರಾತು ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಶಾಲಾ-ಕಾಲೇಜು ಮತ್ತು ಕಾರ್ಖಾನೆಗಳ ಮುಖ್ಯಸ್ಥರಿಗೆ ಪತ್ರ ಬರೆದು ಚಾರ್ಟರ್ಡ್ ಸರ್ವಿಸ್ ಪಡೆದುಕೊಳ್ಳಲು ಕ್ರಮ ಜರುಗಿಸಲಾಗಿರುತ್ತದೆ.
- ನಿಗಮದ ತೆರೆದ ನಿವೇಶನಗಳಲ್ಲಿ ಬಾಡಿಗೆ ಆಧಾರದ ಮೇಲೆ ಇಂಧನ ಬಂಕ್ ಅಳವಡಿಸಿ ವಾಣಿಜ್ಯ ಆದಾಯ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ತನಿಖಾ ತಂಡಗಳನ್ನು ನಿಯೋಜಿಸಿ ಪ್ರಯಾಣಿಕರು ಟಿಕೆಟ್ ಪಡೆದಿರುವ ಬಗ್ಗೆ ನಿಯಮಿತವಾಗಿ ತನಿಖೆ ನಡೆಸುವ ಮೂಲಕ ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಿ, ಟಿಕೆಟ್ ಪಡೆದುಕೊಂಡು ಪ್ರಯಾಣಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಕೇಂದ್ರ ಕಛೇರಿಯ ಮಟ್ಟದಲ್ಲಿ ವಿಭಾಗಗಳ ಕಾರ್ಯಾಚರಣೆಯ ಅಂಕಿ-ಅಂಶಗಳನ್ನು ಪರಿಶೀಲಿಸಿ, ಆದಾಯ ಹೆಚ್ಚಿಸಲು ವಿಭಾಗಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಸಮಾನಾಂತರ ಕಾರ್ಯಾಚರಣೆಯನ್ನು ಅಭ್ಯಸಿಸಿ, ಅನುಸೂಚಿಗಳನ್ನು ಪರಿಷ್ಕರಿಸಲು ಆಯಾ ವಿಭಾಗದವರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ.

2..

- ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಮುಂಗಡ ಟಿಕೆಟ್ ಪಡೆದು ಪ್ರಯಾಣಿಸಲು ಅನುಕೂಲವಾಗುವ ದೃಷ್ಟಿಯಿಂದ ಹೆಚ್ಚಿನ ಸಂಖ್ಯೆಯ ಫ್ರಾಂಚೈಸಿಗಳನ್ನು ನೇಮಿಸಿ, ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಕೇಂದ್ರ ಕಛೇರಿ ಮಟ್ಟದಲ್ಲಿ ನಡೆಯುವ ಇಲಾಖಾ ಮುಖ್ಯಸ್ಥರ/ವಿಭಾಗೀಯ ನಿಯಂತ್ರಣಾಧಿಕಾರಿಗಳ/ವಿಭಾಗೀಯ ಸಂಚಾರ ಅಧಿಕಾರಿಗಳ ಸಭೆಯನ್ನು ಕಾಲಕಾಲಕ್ಕೆ ನಿಗದಿ ಮಾಡಿ ಅನುಸೂಚಿಗಳ ಬಗ್ಗೆ ವಿಶ್ಲೇಷಣೆ ಮಾಡಿ ಇತ್ಯಾದಿಗಳ ಬಗ್ಗೆ ಪರಿಶೀಲಿಸಿ, ಅಗತ್ಯ ಸುಧಾರಣಾ ಕ್ರಮ ಕೈಗೊಳ್ಳುವಂತೆ ವಿಭಾಗೀಯ ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಿ, ಸಾರಿಗೆ ಆದಾಯ ಹೆಚ್ಚಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.
- ವಿವಿಧ ಸಾಮಾಜಿಕ ಹೊಣೆಗಾರಿಕೆಯಡಿ ನೀಡುತ್ತಿರುವ ಸೇವೆಯಿಂದ ಉಂಟಾಗುತ್ತಿರುವ ವೆಚ್ಚ ಪೈಕಿ ಸರ್ಕಾರದ ಪಾಲಿನ ಮೊತ್ತವನ್ನು ನಿಗಮಕ್ಕೆ ಮಂಜೂರು ಮಾಡುವಂತೆ ಸರ್ಕಾರಕ್ಕೆ ಕೋರಲಾಗಿದೆ.

*****